**<u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.</u>**

**<u>ಸಿ. ಸಿ. ನಂಬರಃ 482/2025</u>**

**<u>ಫಿರ್ಯಾದುದಾರರು:</u>**

ಮುಸ್ತಾಕ ಅಹ್ಮದ ತಂದೆ ಇಮಾಮಖಾಶಿಂ ದುಂಡಸಿ,
ವರ್ಷ: 35 ವರ್ಷ, ಉ: ರೈತಾಬಿ ಮತ್ತು ವ್ಯಾಪಾರ,
ಸಾ: ಮಲವಳ್ಳಿ, ಪೋ: ಚವಡಳ್ಳಿ,
ತಾ: ಮುಂಡಗೋಡ (ಉ.ಕ).

**– ವಿರುದ್ಧ –**

**<u>ಆರೋಪಿತ :</u>**

ರಾಜಯ್ಯ ತಂದೆ ಈರಯ್ಯ ಕೋರಿಮಠ,
ವರ್ಷ: 44 ವರ್ಷ, ಉ: ರೈತಾಬಿ ಮತ್ತು ವ್ಯಾಪಾರ,
ಸಾ: ಮಲವಳ್ಳಿ, ಪೋ: ಚವಡಳ್ಳಿ,
ತಾ: ಮುಂಡಗೋಡ (ಉ.ಕ).

**<u>ಆಪಾದನೆ</u>**

ಆರೋಪಿತರಾದ ನೀವು ಫಿರ್ಯಾದಿದಾರರಿಗೆ ಪರಿಚಯಸ್ಥನಿದ್ದು, ನೀವು ಫಿರ್ಯಾದಿಯವರಿಂದ ನಿಮ್ಮ ಕೃಷಿ ಚಟುವಟಿಕೆ ಹಾಗೂ ವೈಯಕ್ತಿಕ ಸಾಲ ಕಟ್ಟಲು ಹಣದ ಅಡಚಣೆಯ ಸಲುವಾಗಿ ರೂ. 5,00,000/-ಗಳ ಹಣವನ್ನು ಕೈಗಡ ಸಾಲವಾಗಿ ಬೇಡಿದ್ದು, ಸದರಿ ಹಣವನ್ನು ಎರಡು ತಿಂಗಳಲ್ಲಿ ಹಿಂತಿರುಗಿಸಿ ಕೊಡುವುದಾಗಿ ಹೇಳಿದ್ದರಿಂದ ನಿಮ್ಮ ಮಾತನ್ನು ನಂಬಿ ಫಿರ್ಯಾದಿದಾರರು ದಿನಾಂಕ 16-08-2024 ರಂದು ರೂ.5,00,000/- ಹಣವನ್ನು ನಿಮಗೆ ಕೈಗಡ ಸಾಲವಾಗಿ ನೀಡಿರುತ್ತಾರೆ. ಆದರೆ ನೀವು ಮಾತಿನಂತೆ ನಡೆದುಕೊಳ್ಳದೆ ಇಂದು ನಾಳೆ ಅಂತಾ ವಿಳಂಬ ಮಾಡುತ್ತಾ ಬಂದಿರುತ್ತಿರಿ. ತದನಂತರ ನೀವು ದಿನಾಂಕ 27-10-2024 ರಂದು ನಿಮ್ಮ ಖಾತೆ ಇರುವ ಕೆನರಾ ಬ್ಯಾಂಕ್ ಮುಂಡಗೋಡ ಶಾಖೆ ಚೆಕ್ಕ ನಂಬರ್ 491823 ದಿನಾಂಕ 28-10-2024 ಎಂದು ನಮೂದಿಸಿದ ಒಟ್ಟು ರೂ.5,00,000/-ಗಳ ಮೊತ್ತಕ್ಕೆ ಚೆಕನ್ನು ನೀಡಿರುತ್ತೀರಿ, ತದನಂತರ ತಮ್ಮ ಭರವಸೆಯ ಮೇರೆಗೆ ಫಿರ್ಯಾದಿದಾರರ ಸದ್ರಿ ಚೆಕ್ಕನ್ನು ದಿನಾಂಕ 28-10-2024 ರಂದು

ಫಿರ್ಯಾದಿ ಅವರ ಖಾತೆ ಇರುವ ಕೆನರಾ ಬ್ಯಾಂಕ್ ಮುಂಡಗೋಡ ಶಾಖೆಗೆ ನಗದೀಕರಣಕ್ಕಾಗಿ ಹಾಜರು ಪಡಿಸಿದಾಗ, ನೀವು ಹೊಂದಿರುವ ಖಾತೆಯಲ್ಲಿ "FUNDS INSUFFICIENT" ಮತ್ತು "DRAWER'S SIGNATURE DIFFERS"ಎಂದು ನಮೂದು ಮಾಡಿ ದಿನಾಂಕ 28-10-2024 ರಂದು ಮೇಮೋದೊಂದಿಗೆ ವಾಪಸ್ಸ ಬಂದಿರುತ್ತದೆ.

ನಂತರ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ದಿನಾಂಕ 21-11-2024 ರಂದು ನೋಟಿಸ್‌ನ್ನು ನಿಮಗೆ ನೀಡಿದ್ದರೂ, ನೀವು ಸದ್ರಿ ನೋಟಿಸ್‌ನ್ನು ದಿನಾಂಕ 03-12-2024 ರಂದು ಪಡೆಯದೇ ಇದ್ದುದ್ದರಿಂದ Party out of station ಎಂಬ ಕಾರಣದಿಂದ ಸದ್ರಿ ನೋಟಿಸು ವಾಪಸ್ಸು ಬಂದಿರುತ್ತದೆ. ಆದರೂ ಸಹ ನೀವು ಇದುವರೆಗೂ ಚೆಕ್ಕಿನ ಹಣವನ್ನು ಪಾವತಿ ಮಾಡದೆ, ಆ ಮೂಲಕ ನೆಗೋಶಿಯೇಬಲ್ ಇನ್ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ - ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ -

ಪ್ರಶ್ನೆ - ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ -

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ - -2026

ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿ,
ಮುಂಡಗೋಡ